

## ನಕ್ಕುಬಿಡಿ

ಕಂಪೌಂಡರ್: ಡಾಕ್ಟರ್ ನೀವು ಪ್ರತಿ ರೋಗಿಗೂ 'ನಿನ್ನೆ ನೀನು ಏನು ತಿಂದಿದ್ದಿ' ಅಂತ ಯಾಕೆ ಕೇಳ್ತೀರಿ?

ಡಾಕ್ಟರ್: ಅದರಿಂದ, ಅವನಿಗೆ ಎಷ್ಟು ಫೀಸು ಕೊಡುವ ಸಾಮರ್ಥ್ಯ ಇದೆ ಎಂದು ತಿಳಿಯುತ್ತದೆ. ನಂತರ ನಾನು ಅದಕ್ಕೆ ತಕ್ಕಂತೆ ಚಿಕಿತ್ಸೆ ಪ್ರಾರಂಭಿಸುತ್ತೇನೆ.

★★★

ಒಬ್ಬ: ಯುವರ್ ಗುಡ್ ನೇಮ್ ಪ್ಲೀಸ್...

ಇನ್ನೊಬ್ಬ: ಏನಯ್ಯಾ ನಿನ್ನ ಮಾತಿನ ಅರ್ಥ? ನನಗೆ ಬ್ಯಾಡ್ ನೇಮ್ ಕೂಡ ಇದೆ ಅಂತಾನಾ?

★★★

ಮನೋವೈದ್ಯ: ಅಲ್ಲಮ್ಮ, ನಿನ್ನ ಗಂಡ ಬಾಗಿಲು ತೆಗೆದು ಒಳಗಡೆ ಹೋಗು ಅಂದರೆ ಅದರಲ್ಲಿ ಹುಚ್ಚುತನ ಏನು ಬಂತು?

ಹೆಂಗಸು: ಅವರು ಹೇಳಿದ್ದು ಇಲಿ ಬೋನಿನ ಬಾಗಿಲು ಡಾಕ್ಟ್ರೇ ...

★★★

ರಾಮಯ್ಯ: ನಾನು ದೇವಾಲಯಕ್ಕೆ ಫ್ಯಾನ್ ಅನ್ನು ಕಾಣಿಕೆಯಾಗಿ ನೀಡಬೇಕೆಂದಿದ್ದೇನೆ. ಆದರೆ ಒಂದು ಷರತ್ತು.

ಪೂಜಾರಿ: ಏನದು?

ರಾಮಯ್ಯ: ಭಕ್ತರು ದೇವಾಲಯಕ್ಕೆ ಬಂದಾಗ ಫ್ಯಾನ್ ಆಫ್ ಮಾಡಿರಬೇಕು.

ಪೂಜಾರಿ: ಯಾಕೆ?

ರಾಮಯ್ಯ: ಫ್ಯಾನ್ ಮೇಲೆ ಇರೋ ನನ್ನ ಹೆಸರು ಅವರಿಗೆ ಕಾಣಬೇಡವೇ?

★★★

ರಮೇಶ: ನನಗೆ ಹೋಟೆಲ್ ನಲ್ಲಿ ಏನೂ ತಿನ್ಬೇಡ ಅಂತ ಡಾಕ್ಟರ್ ಹೇಳಿದ್ದಾರೆ ಕಣೋ...!

ಸುರೇಶ: ನಿನಗೆ ಅಡುಗೆ ಮಾಡೋಕೆ ಬರಲ್ಲ. ಮತ್ತೆ ಈಗ ಊಟ ಹೇಗೆ ಮಾಡ್ತೀಯಾ?

ರಮೇಶ: ಹೋಟೆಲ್ ನಿಂದ ಪಾರ್ಸಲ್ ತರಿಸಿ ಮನೆಯಲ್ಲಿ ತಿಂತೀನಿ!

★★★




ಟೀಚರ್: ರವೀ, ನಿನಗೆ ಎಲ್ಲಾ ವಿಷಯಗಳಲ್ಲಿ ನೂರಕ್ಕೆ ನೂರು ಅಂಕ ಬಂದು ಲೆಕ್ಕದಲ್ಲಿ ಮಾತ್ರ 35 ಬಂದರೆ ಏನ್ಮಾಡ್ತೀಯಾ...?

ರವಿ: ತುಂಬಾ ಸಂತೋಷ ಪಡ್ತೇನೆ ಟೀಚರ್. ಯಾಕಂದ್ರೆ ಲೆಕ್ಕದಲ್ಲಿ ನಾನೆಂದೂ 20 ಅಂಕಗಳನ್ನು ದಾಟಿಲ್ಲ.

★★★

ರಾಜಕಾರಣಿ: ಡಾಕ್ಟರ್, ನನ್ ಮಗ ಒಂದು ರೂಪಾಯಿ ನಾಣ್ಯ ನುಂಗಿಬಿಟ್ಟಿದ್ದಾನೆ. ಅವನಿಗೆ ಏನಾಗುತ್ತೋ ಅನ್ನೋ ಭಯ.

ಡಾಕ್ಟರ್: ಕೋಟಿಗಟ್ಟಲೆ ಹಣ ನುಂಗಿದ ನಿಮಗೇ ಏನೂ ಆಗಿಲ್ಲ. ಇನ್ನು ಒಂದು ರೂಪಾಯಿ ನುಂಗಿದ ಅವನಿಗೆ ಏನಾಗುತ್ತೆ? ಧೈರ್ಯದಿಂದ ಇರಿ.

(ಸಂಗ್ರಹ) **ಬಿ.ನರಹರಿ ಭಟ್. ವಿದ್ಯಾರಣ್ಯಪುರ.**

## ಗರ್ಭದ ಮಗುವಿನಿಂದ ಅಮ್ಮನಿಗೊಂದು Request letter

**ಮುದ್ದಿನ ಅಮ್ಮ/Dear motherboard, Doctor ಅಂಕಲ್ ಮೊನ್ನೆ ನಿಂಗೆ TABLET ತಗೊಳ್ಳಿ ಅಂದಾಗ ನಾನೆಲ್ಲೋ Samsung tabletooo, Sony tabletoo ಬರೆದಿದ್ದಾರೇ ಅಂದ್ಕೊಂಡಿದ್ದೆ, ಡಬ್ಬ Doctoru ಯಾವುದೋ vitamin tablet ಕೊಟ್ಟಿದ್ದಾರೆ. ಛೇ! ನೀನಾದರೂ ಆ Brazil aunti ಥರ ಒಂದಾದರು mobile phone ನುಂಗಬಾರದ? PLEASE ಬೇಗ ಒಂದು phone ನುಂಗಮ್ಮ. 9 months ಒಬ್ಬನೇ ಒಳಗೆ ಇರಬೇಕು, ನಂಗೆ ತುಂಬಾ bore ಆಗುತ್ತೆ. Doctor uncle scan ಮಾಡಿ Report ಕೊಡಕ್ ಮುಂಚೆ ನಾನೇ Selfies Click ಮಾಡಿ whatsapp ಮಾಡ್ತೀನಿ, ವಾರ ವಾರ ನನ್ನ status update ಮಾಡ್ತೀನಿ, Daddyಗೂ tag ಮಾಡ್ತೀನಿ. Bore ಆದಾಗ Honey singh uncle songs ನ download ಮಾಡಿ ಕೇಳ್ತೀನಿ, We are linked-in amma, we are umbilically connected. ಅಮ್ಮ IIT ಗೆಲ್ಲಾ ಹೋಗ್ಬೇಕಾದ್ರೆ ತುಂಬ ಬೇಗ coaching ತಗೊಬೇಕಂತೆ, ಬೇಗ ಬೇಗ lessons update ಮಾಡು. ಇಲ್ಲಿಂದ್ಲೇ ಓದಿ, homework ಮಾಡಿ ನಿನ್ನ timeline ನಲ್ಲಿ post ಮಾಡ್ತೀನಿ, comment ಮಾಡು. ಅಮ್ಮ ಅಮ್ಮ Acidity ಆಗೋ ಅಂತದ್ದು ಏನೂ ತಿನ್ನಬೇಡಮ್ಮ, ನಿನ್ನ ಹೊಟ್ಟೆ ಒಳಗಿಂದ ಬರೋ soundu ನಾನು temple run ಆಡೋವಾಗ disturb ಮಾಡತ್ತೆ. Laaast request ಅಮ್ಮ... ಎಲ್ಲಾದರೂ ಇರು ಎಂತಾದರು ಇರು ಒಟ್ಟಿನಲ್ಲಿ Signal ಸಿಗೋಕಡೆ ಇರು.**

**-ಡಿಂಕು**



ಗಣೇಶ ಅರಳಿಕಟ್ಟೆ